ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 5, November-December 2022, Pp. 69- 77
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಬಿ ಷೇಕ್ ಅಲಿ ಬರವಣಿಗೆಗಳಲ್ಲಿ ಟೀಪು ಸುಲ್ತಾನನ ವಾಣಿಜ್ಯ ನೀತಿ: ಒಂದು ವಿಶ್ಲೇಷಣೆ

**ಸೈಯದ್ ಬರ್ಕತ್ ಕೆ ಎ***
*ಸಂಶೋಧಕರು, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***Abstract:***
*ಟೀಪುವಿನದು ಒಂದು ಆಕರ್ಷಕವಾದ ವ್ಯಕ್ತಿತ್ವ. ಅವನ ವ್ಯಕ್ತಿತ್ವ ಮತ್ತು ಆಳ್ವಿಕೆಯು ಅನೇಕ ದೃಷ್ಟಿಗಳಿಂದ ಮಹತ್ವದ್ದಾಗಿದೆ. ಭಾರತದಲ್ಲಿ ಬ್ರಿಟಿಷರಿಗೆ ಪ್ರಬಲವಾದ ವಿರೋಧವನ್ನು ಒಡ್ಡಿದುದರಲ್ಲಿ ಅವನಷ್ಟು ದುಸ್ಸಾಧ್ಯವಾದ ಶತ್ರುವನ್ನು ಬ್ರಿಟಿಷರು ಎಂದೂ ಎದುರಿಸಿರಲಿಲ್ಲ. ಟೀಪುವಿನ ಆಳ್ವಿಕೆ ಪ್ರಾರಂಭವಾಗುವುದು ಹಾಗೂ ಕೊನೆಗೊಳ್ಳುವುದು ಬ್ರಿಟಿಷರ ವಿರುದ್ಧ ಯುದ್ಧ ಮಾಡುತ್ತಲೆ ಎಂಬುದು ಟೀಪುವಿನ ಹೋರಾಟದ ಮಹತ್ವತೆಯನ್ನು ತಿಳಿಸುತ್ತದೆ. ಭಾರತದಿಂದ ಇಂಗ್ಲಿಷರನ್ನು ಹೊರಗಟ್ಟುವುದು ಟೀಪುವಿನ ಧ್ಯೆಯವಾಗಿತ್ತು ಅದಕ್ಕಾಗಿ ತನ್ನೆಲ್ಲ ಸಾಧನ ಶಕ್ತಿ ಸಂಪತ್ತೂ, ಸಾಮರ್ಥ್ಯ, ಅಧಿಕಾರವನ್ನೂ ಉಪಯೋಗಿಸಿದನು; ಟೀಪುವಿನ ಆಳ್ವಿಕೆಯ ಎರಡನೆಯ ಮುಖ್ಯವಾದ ಅಂಶವೆಂದರೆ: ತನ್ನ ಪ್ರಜೆಗಳ ಕಲ್ಯಾಣ. ಅವನ ಆಳ್ವಿಕೆಯ ಸುಧಾರಣಾ ಪ್ರಭಾವ ಎಲ್ಲ ವಲಯಗಳಿಗೂ ಹರಡಿತ್ತು. ಅದರಂತೆ ತನ್ನ ಪ್ರಜೆಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ, ತನ್ನ ನಾಡಿನ ಗೌರವವನ್ನೂ, ಸಂಪತ್ತಿನ ಅಭಿವೃದ್ಧಿಯನ್ನು ಹೆಚ್ಚಿಸಲು ಶಕ್ತಿ ಮೀರಿ ಶ್ರಮಿಸಿದನು. ಈ ಹಿನ್ನಲೆಯಲ್ಲಿ ಬಿ ಷೇಕ್ ಅಲಿ ಬರವಣಿಗೆಗಳಲ್ಲಿ ಉಲ್ಲೇಖವಾಗಿರುವ ಟೀಪು ಸುಲ್ತಾನನ ವಾಣಿಜ್ಯ ನೀತಿಯ ಬಗ್ಗೆ ವಿಮರ್ಶಿಸಲಾಗಿದೆ.*

***Keywords:*** *ಬಿ ಷೇಕ್ ಅಲಿ, ಟೀಪು ಸುಲ್ತಾನ, ವಾಣಿಜ್ಯ ನೀತಿ, ಬ್ರಿಟಿಷ್ ಭಾರತ, ಕೃಷಿ.*

## ಪೀಠಿಕೆ

ಟೀಪುವು ಅಧಿಕ ಆಸಕ್ತಿ ತೋರಿಸಿದ ಕ್ಷೇತ್ರ ವಾಣಿಜ್ಯ ಮತ್ತು ಕೈಗಾರಿಕೆ. ಕೃಷಿಯ ಮೂಲಕ ಸಂಪತ್ತಿನ ಸಂಚಯವು ಕಷ್ಟವಾದುದು ಮತ್ತು ಪ್ರಯಾಸದ ಕೆಲಸ ಆದರೆ ವಾಣಿಜ್ಯ ಮತ್ತು ಕೈಗಾರಿಕೆಗಳು ಕ್ಷಿಪ್ರವಾಗಿ ಫಲ ನೀಡುವಂಥದ್ದು. ಒಂದು ದೇಶದ ಅಭ್ಯುದಯವು ಬಹುಮಟ್ಟಿಗೆ ಕೈಗಾರಿಕೋತ್ಪಾದನೆಯ ಮೇಲೆ ನಿಲ್ಲುತ್ತದೆ. ಅದೃಷ್ಟವಶಾತ್ ಮೈಸೂರು ರಾಜ್ಯದಲ್ಲಿ ವಾಣಿಜ್ಯ ಬೆಳೆ ಸಮೃದ್ಧವಾಗಿರುವುದರ ಜೊತೆಗೆ ಕರಾವಳಿಯಲ್ಲಿ ರಫ್ತು ಮತ್ತು ಆಮದುಗಳಿಗೆ ಸೌಲಭ್ಯವೂ ಹೇರಳವಾಗಿದ್ದಿತು. ಮೆಣಸು, ಏಲಕ್ಕಿ, ರೇಷ್ಮೆ, ಶ್ರೀಗಂಧ, ಅಡಿಕೆ, ತೆಂಗಿನಕಾಯಿ, ದಂತ ಮೊದಲಾದ ವಸ್ತುಗಳಿಗೆ ಮೈಸೂರು ತುಂಬಾ ಪ್ರಸಿದ್ಧವಾಗಿದ್ದು, ಪಾಶ್ಚಿಮಾತ್ಯ ಮಾರುಕಟ್ಟೆಗಳಲ್ಲಿ ಅವುಗಳಿಗೆ ವಿಫುಲವಾದ ಬೇಡಿಕೆಯಿದ್ದಿತು. ಇವುಗಳ ವ್ಯಾಪಾರವು ವಿದೇಶೀಯರ ಕೈಗೆ ಬೀಳಬಾರದೆಂಬುದು ಟೀಪುವಿನ ಆಸಕ್ತಿಯಾಗಿದ್ದಿತು. ಮೈಸೂರು ರಾಜ್ಯವು ಈ ವಸ್ತುಗಳ ಅತ್ಯಧಿಕ ರಫ್ತುಗಾರ ರಾಜ್ಯವಾಯಿತು. ಟೀಪುವಿನ ವ್ಯಾಪಾರಿ ನೌಕೆಗಳಲ್ಲಿ ತುಂಬಿ ಈ ವಸ್ತುಗಳನ್ನು ಹೊರಕ್ಕೆ ಕಳುಹಿಸಿಕೊಟ್ಟು ಅಲ್ಲಿಂದ ಇತರ ಅಗತ್ಯ ವಸ್ತುಗಳನ್ನು ತುಂಬಿಸಿ ತರಿಸಲಾಗುತ್ತಿತ್ತು. ಈ ಸಾಗರೋತ್ತರ ವ್ಯಾಪಾರವನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ಟೀಪುವು

***Please cite this article as:*** ಸೈಯದ್‌ಬರ್ಕಾತ್ ಕೆ ಎ. (2022). ಬಿ ಷೇಕ್ ಅಲಿ ಬರವಣಿಗೆಗಳಲ್ಲಿ ಟೀಪು ಸುಲ್ತಾನನ ವಾಣಿಜ್ಯ ನೀತಿ: ಒಂದು ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(5), 69–77.

ನಿರ್ವಹಿಸಿದನು. ಹೊರದೇಶಗಳಲ್ಲಿ ವ್ಯಾಪಾರ ಕೋಠಿಗಳನ್ನು ಸ್ಥಾಪಿಸಿ ತನ್ನ ವಾಣಿಜ್ಯ ಪ್ರತಿನಿಧಿಗಳನ್ನೂ ನೇಮಿಸಿ ವ್ಯಾಪಕ ಪ್ರಮಾಣದಲ್ಲಿ ನಿರ್ವಹಿಸಿದನು.

1787ರ ಜನವರಿ 16ರಂದು ಟೀಪುವು ಆರ್ಮೇನಿಯನ್ ವ್ಯಾಪಾರಿ ಯಾಕೂಬ್‌ನಿಗೆ "ನಮ್ಮ ರಾಜ್ಯಕ್ಕೆ ನೀವು ತರಲು ಅಪೇಕ್ಷಿಸುವ ವಸ್ತುಗಳ ಮೇಲೆ ಸುಂಕ ವಿನಾಯಿತಿ ನೀಡಲಾಗಿದೆ ಆದ್ದರಿಂದ ಪೂರ್ಣ ವಿಶ್ವಾಸದಿಂದ ನಮ್ಮ ರಾಜ್ಯಕ್ಕೆ ಸಮುದ್ರದ ಮೂಲಕ ಅಥವಾ ಭೂಮಾರ್ಗದ ಮೂಲಕ, ನಿಮಗೆ ಇಚ್ಛೆಬಂದ ವಿಧಾನದಿಂದ ನಿಮ್ಮ ರೇಷ್ಮೆ ವಸ್ತು ಹಾಗೂ ಇತರ ಸರಕುಗಳನ್ನೂ ಮಾರಾಟ ಮಾಡಿ ಹಾಗೂ  ಇಲ್ಲಿಯ ವಸ್ತುಗಳನ್ನು ಮುಕ್ತವಾಗಿ ಕೊಳ್ಳಿರಿ ಮತ್ತು ನಿಮ್ಮ ಸರಕುಗಳನ್ನು ಎಲ್ಲಿಗೆ ತರಲು ಬಯಸುವಿರೋ ಅಲ್ಲಿ ನಿಮಗಾಗಿ ಒಂದು ವಸತಿಯನ್ನು ಒದಗಿಸಲಾಗುತ್ತದೆ; ಯಾವಾಗಲಾದರೂ ನಿಮಗೆ ಕೆಲಸಗಾರರು ಅಥವಾ ಕಾರ್ಮಿಕರು ಅಗತ್ಯವಾಗಿದ್ದರೆ ಅವರನ್ನೂ ನಮ್ಮ ತಾಲ್ಲೂಕುದಾರರು ಕೂಲಿಯ ಮೇಲೆ ಒದಗಿಸುತ್ತಾರೆ." ಎಂದು ಪತ್ರ ಬರೆದನು. ಇದೇ ರೀತಿ 1785 ಜನವರಿ 28ರಂದು ಷೇಕ್ ಅಹಮದ್ ಎಂಬ ಮತ್ತೊಬ್ಬ ವರ್ತಕನಿಗೂ ಕೂಡ ಎಲ್ಲಾ ಬಗೆಯ ಸೌಲಭ್ಯಗಳನ್ನು ನೀಡುವುದಾಗಿ ಭರವಸೆ ನೀಡಿ ಪತ್ರ ಬರೆದನು. 1786 ಜನವರಿ 16ರಂದು ಮಸ್ಕತ್‌ನ ಇಮಾಮನಿಗೆ "ನಮ್ಮ ನಡುವೆ ಇರುವ ಸ್ನೇಹವನ್ನು ಪರಿಗಣಿಸಿ, ನಿಮ್ಮ ಹಡಗುಗಳಿಗೆ ಮತ್ತು ದೋಣಿಗಳಿಗೆ ಇದುವರೆಗೆ ವಿಧಿಸುತ್ತಿದ್ದ ಸುಂಕದಲ್ಲಿ ಅರ್ಧವನ್ನು ವಿನಾಯಿತಿ ಕೊಡಲಾಗಿದೆ. ಅದರ ಸಂಬಂಧವಾಗಿ ನಮ್ಮ ಎಲ್ಲಾ ಬಂದರುಗಳ ಗವರ್ನರ್‌ಗಳಿಗೂ ಆದೇಶವನ್ನು ಕಳಿಸಲಾಗಿದೆ. ಆದ್ದರಿಂದ ನೀವು ನಿಮ್ಮ ಹಡಗುಗಳನ್ನು ದೋಣಿಗಳನ್ನೂ ಸರಕು ತುಂಬಿ ನಮ್ಮ ಬಂದರುಗಳಿಗೆ ಕಳುಹಿಸಬಹುದು ಎಂದು ಟೀಪು ಪತ್ರ ಬರೆದನು.

ಟೀಪುವು ಮಸ್ಕತ್ತಿನಲ್ಲಿ ಮಾತ್ರವಲ್ಲದೆ, ಹಾರ್ಮುಜ್, ಏಡನ್, ಬಾ, ಬುಷ್ಯ ಮತ್ತು ಜಿದ್ದಾಗಳಲ್ಲೂ ತನ್ನ ವ್ಯಾಪಾರ ಕೋಠಿಗಳನ್ನು ಸ್ಥಾಪಿಸಿದನು. ಟೀಪುವಿನ ಕಡೆಯ ಮುಖ್ಯ ದಳ್ಳಾಳಿಯಾಗಿ ಬಸಾದಲ್ಲಿ ಅಬ್ದುಲ್ಲಾ ಎಂಬ ಯಹೂದಿ ಇದ್ದನು. ಓಮಾನ್‌ನ ಇಮಾಂನೊಂದಿಗೂ ಟೀಪು ಆತ್ಮೀಯ ಸಂಬಂಧಗಳನ್ನು ಬೆಳೆಸಿದ್ದನು. ಓಮಾನ್‌ನಿಂದ ಆಮದು ಮಾಡಿಕೊಳ್ಳುತ್ತಿದ್ದ ವಸ್ತುಗಳೆಂದರೆ, ಖರ್ಜೂರ, ಕುದುರೆಗಳು, ರೇಷ್ಮೆ ಹುಳುಗಳು, ಗಂಧಕ ಮತ್ತು ಮುತ್ತುಗಳು. ಅರಬ್ ಮತ್ತು ಆರ್ಮೇನಿಯನ್ ವರ್ತಕರು ಬಂದು ಮೈಸೂರಿನಲ್ಲಿ ನೆಲೆಸಲು ಟೀಪುವು ಪ್ರೋತ್ಸಾಹಕೊಟ್ಟನು. ಯಶಸ್ವೀ ವ್ಯಾಪಾರಿಗಳಾದ್ದರಿಂದ ಅವರಿಗೆ ವಿಶೇಷ ಸವಲತ್ತುಗಳನ್ನು ನೀಡಿದನು. ಮೈಸೂರು ಮತ್ತು ಓಮನ್‌ಗಳ ನಡುವೆ ವಿಧ್ಯುಕ್ತ ಒಪ್ಪಂದವೇನೂ ಆಗಿರದಿದ್ದರೂ ಟೀಪುವಿನ ರಾಯಭಾರಿಗಳು ಆ ಪ್ರದೇಶದಲ್ಲಿ ವಾಣಿಜ್ಯಕ್ಕಿದ್ದ ಅವಕಾಶಗಳ ಬಗೆಗೆ ವಿಸ್ತಾರವಾದ ವರದಿಯನ್ನು ಒದಗಿಸಿದರು. ಹೀಗೆ ಟೀಪುವು ಕೊಲ್ಲಿ ಪ್ರದೇಶದೊಂದಿಗೆ ನಿಕಟ ವಾಣಿಜ್ಯ ಸಂಬಂಧವನ್ನು ರಚಿಸಿಕೊಳ್ಳಲು ಶಕ್ತನಾದನು.

ಹೀಗೆ ಮೈಸೂರು ರಾಜ್ಯದಲ್ಲಿ ವಿದೇಶ ವರ್ತಕರಿಗೆ ಪ್ರೋತ್ಸಾಹ ನೀಡಿದ್ದರ ಪರಿಣಾಮಗಳು ದೂರಸ್ಪರ್ಶಿಯಾಗಿದ್ದುವು. ಅದು ಬ್ರಿಟಿಷ್ ವ್ಯಾಪಾರ ವಾಣಿಜ್ಯಗಳ ಮೇಲೆ ನಿರ್ಬಂಧವನ್ನು ಹೇರಿತು. ಮಲಬಾರಿನ ಕರಿಮೆಣಸನ್ನು ಬಹುವಾಗಿ ಅವಲಂಬಿಸಿದ್ದ ಇಂಗ್ಲಿಷರಿಗೆ ಬಹು ದೊಡ್ಡ ಪೆಟ್ಟು ಬಿದ್ದಿತು. ಬಹುಪಾಲು ಶ್ರೀಗಂಧವನ್ನು ಯೂರೋಪಿಗೆ ಬದಲಾಗಿ ಚೈನಾ ದೇಶಕ್ಕೆ ಕಳುಹಿಸಲಾಯಿತು. ಯೂರೋಪಿನ ಭಟ್ಟಿಗಳಿಗೆ, ಡಿಸ್ಟಿಲರಿಗಳಿಗೆ ಭಾರೀ ಬೇಡಿಕೆಯಲ್ಲಿದ್ದ ಏಲಕ್ಕಿಯ ರಫ್ತು ತನ್ನ ದಿಕ್ಕನ್ನು ಬದಲಿಸಿ ಅರೇಬಿಯಾ ಮತ್ತು ಮಧ್ಯ ಪ್ರಾಚ್ಯದೇಶಗಳಿಗೆ ಕಳುಹಿಸಲಾಯಿತು. ಇಂಗ್ಲಿಷರಿಗೆ ಅಪಾರ ಆಸಕ್ತಿಯದಾಗಿದ್ದ ಕರಿಮೆಣಸು ವ್ಯಾಪಾರ ತಪ್ಪಿದ್ದು ಅವರಿಗೆ ಬಹಳ ಕಳವಳವನ್ನುಂಟುಮಾಡಿತು. ಅದರ

ಬೆಲೆಗಳು ಗಗನಕ್ಕೇರಿದುವು. ಏರಿದ ಬೆಲೆಯ ಪೂರ್ಣ ಪ್ರಯೋಜನವನ್ನು ಪಡೆಯಲು ಚಿರಿಕಲ್ ರಾಜನಂತಹ ಮಲಬಾರಿನ ಸಣ್ಣ ನಾಯಕನೂ ಮೆಣಸು ವ್ಯಾಪಾರದ ಏಕಸ್ವಾಮ್ಯ ಪಡೆದನು. ವಿದೇಶವೊಂದರಲ್ಲಿ ವಾಣಿಜ್ಯ ಕೇಂದ್ರವೊಂದನ್ನು ಸ್ಥಾಪಿಸುವುದಕ್ಕೆ ಮೊದಲು ಟೀಪುವು ಅಂತಹ ವಾಣಿಜ್ಯ ಸಂಪರ್ಕಗಳನ್ನು ಬೆಳೆಸಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಂದ ಅನುಮತಿ ಪಡೆಯುತ್ತಿದ್ದನು. ಅಂತಹ ವಾಣಿಜ್ಯ ಸಂಪರ್ಕಗಳ ವ್ಯಾಪ್ತಿಯನ್ನು ನಿರೂಪಿಸುವ ಒಂದು ಒಪ್ಪಂದವನ್ನು ಸಿದ್ಧಪಡಿಸಲಾಗುತ್ತಿತ್ತು. ಈ ವ್ಯವಹಾರವನ್ನು ನಿರ್ವಹಿಸಲು ವ್ಯಾಪಾರಿ ಪ್ರತಿನಿಧಿಗಳನ್ನು ನೇಮಿಸಲಾಗುತ್ತಿತ್ತು.

ದೇಶದ ಹೊರಗೆ ಸ್ಥಾಪಿಸಿದ ವಾಣಿಜ್ಯ ಕೇಂದ್ರಗಳಲ್ಲಿ ಮಸ್ಕತ್‌ನ ಕೇಂದ್ರಗಳು ಬಹುಮುಖ್ಯವಾಗಿದ್ದವು. ಅಲ್ಲಿ ಮೈಸೂರಿನ ಬೇರೆ ಬೇರೆ ಐವತ್ತು ಸರಕುಗಳು ಅಲ್ಲಿ ಮಾರಾಟಕ್ಕಿದ್ದವು. ಟೀಪುವು ಮಸ್ಕತ್ತಿಗೆಂದು ಒಬ್ಬ ಖಾಯಂ ವಾಣಿಜ್ಯ ಕಮೀಷನರ್‌ನ್ನು ನೇಮಕ ಮಾಡಿದ್ದನು. ಮಯೋಸೇಟ್ ಎಂಬ ಹಿಂದೂ ವರ್ತಕನು ಕಲ್ಲಿಕೋಟೆಯಲ್ಲಿ ಒಂದು ವ್ಯಾಪಾರ ಸಂಸ್ಥೆಯನ್ನು ತೆರೆಯಲು ಅಪೇಕ್ಷೆ ಪಟ್ಟಾಗ ಟೀಪುವು ತಕ್ಷಣವೇ ಅನುಮತಿ ನೀಡಿದನು. ಮೈಸೂರಿನಿಂದ ಮಸ್ಕತ್ತಿಗೆ ರಫ್ತಾಗುತ್ತಿದ್ದ ಸರಕುಗಳಲ್ಲಿ ಮುಖ್ಯವಾದದ್ದು ಅಕ್ಕಿ. ಆದರೆ ಟೀಪುವಿನ ಅನುಮತಿಯಿಲ್ಲದೆ ಪೋರ್ಚುಗೀಸರಾಗಲಿ, ಡಚ್ಚರಾಗಲಿ, ಇಂಗ್ಲಿಷರಾಗಲಿ ಯಾವುದೇ ಯೂರೋಪಿಯನರಿಗೆ ಅದನ್ನು ಮತ್ತೆ ಮಾರುವಂತಿಲ್ಲ ಎಂಬ ಷರತ್ತಿನ ಮೇಲೆ ಅಕ್ಕಿಯನ್ನು ಅಲ್ಲಿ ಮಾರಾಟ ಮಾಡಲಾಗುತ್ತಿದ್ದಿತು.

1786 ಜನವರಿ 22ರಂದು ಟೀಪುವು ಬರ್ಮಾ ದೇಶದ ಪೆಗುವಿನ ರಾಜನಿಗೆ ಒಂದು ಪತ್ರವನ್ನು ಬರೆದು ಅವನ ದೇಶದೊಂದಿಗೆ ನಿಕಟಪರ ವಾಣಿಜ್ಯ ಸಂಬಂಧಗಳನ್ನು ಬೆಳೆಸಿಕೊಳ್ಳಲು ಇಚ್ಛೆಯನ್ನು ವ್ಯಕ್ತಪಡಿಸಿದನು. ಮುಹಮ್ಮದ್ ಕಾಸಿಮ್ ಮತ್ತು ಮುಹಮ್ಮದ್ ಇಬ್ರಾಹಿಂ ಎಂಬ ತನ್ನ ಇಬ್ಬರು ಪ್ರತಿನಿಧಿಗಳನ್ನು ಪೆಗುವಿಗೆ ಕಳಿಸಿಕೊಟ್ಟನು. ಅವರು ವಾಣಿಜ್ಯದಲ್ಲಿ ಮೈಸೂರಿನ ನಂಟು ಬೆಳೆಸುವಂತೆ ಕೋರಿಕೆಯ ಪತ್ರಗಳನ್ನು ಅಮೂಲ್ಯವಾದ ಉಡುಗೊರೆಗಳೊಂದಿಗೆ ರಾಜನ ಬಳಿಗೆ ಹೊಯ್ದರು. ಹಾಗೆಯೇ ಟೀಪುವಿಗೆ ಆಟೋಮನ್ ಸಾಮ್ರಾಜ್ಯದೊಂದಿಗೆ ಸಂತೋಷದಾಯಕವಾದ ವಾಣಿಜ್ಯ ಸಂಬಂಧಗಳು ಏರ್ಪಟ್ಟಿದ್ದುವು. ನಾಲ್ಕು ಜನ ಬಹುಮುಖ್ಯ ರಾಯಭಾರಿಗಳಾದ ಗುಲಾಂ ಅಲಿಖಾನ್, ಲತೀಫ್ ಅಲಿ ಖಾನ್, ನೂರುಲ್ಲಾಖಾನ್ ಮತ್ತು ಮುಹಮ್ಮದ್ ಹನೀಫ್ ಇವರನ್ನು ರಾಜಕೀಯ ನಿಯೋಗವಾಗಿ ತುರ್ಕಿಗೆ ಕಳುಹಿಸಿದ ಸಂದರ್ಭದ ಉಪಯೋಗ ಮಾಡಿಕೊಂಡು ನಿಕಟವಾದ ವಾಣಿಜ್ಯ ಸಂಬಂಧಗಳನ್ನು ಬೆಳೆಸಿಕೊಳ್ಳುವ ಪ್ರಸ್ತಾಪವನ್ನೂ ಮುಂದಿಟ್ಟನು. ತುರ್ಕಿಯ ಸುಲ್ತಾನನಿಂದ, ಬಸಾದಲ್ಲಿ ಮೈಸೂರಿನ ಮಾರಾಟ ಕೇಂದ್ರಗಳನ್ನು ತೆರೆಯಲು ಅನುಮತಿ ಪಡೆದುಕೊಂಡು ಬರಬೇಕೆಂದು ರಾಯಭಾರಿಗಳಿಗೆ ಆದೇಶ ನೀಡಿದ್ದನು. ಅದಕ್ಕೆ ಪ್ರತಿಯಾಗಿ ಅವರಿಗೆ ಮಂಗಳೂರಿನಲ್ಲಿ ಕೆಲವು ರಿಯಾಯಿತಿಗಳನ್ನು ಕೊಡಲು ಅಪೇಕ್ಷಿಸಿದ್ದನು.

ಪಶ್ಚಿಮ ಏಷ್ಯದ ತುರ್ಕಿ ಸಾಮ್ರಾಜ್ಯದಲ್ಲಿ ನಡೆಯುತ್ತಿದ್ದ ಈ ರಾಜಕೀಯ ವಿಕ್ಷೋಭೆಯನ್ನು ಟೀಪು ಚೆನ್ನಾಗಿ ಅರಿತಿದ್ದನು. ಆಗ ಅಲ್ಲಿದ್ದ ಶೂನ್ಯತೆಯ ಪೂರ್ಣ ಪ್ರಯೋಜನವನ್ನು ಪಡೆದು ಮೈಸೂರಿನ ಹಿತವನ್ನು ಬೆಳೆಸಿಕೊಳ್ಳಲು ಅವನು ಬಯಸಿದನು. ತುರ್ಕಿಯ ಸುಲ್ತಾನನ ಬಳಿಗೆ ಹೋದ ಟೀಪುವಿನ ರಾಯಭಾರಿಗಳಿಗೆ ಕೊಲ್ಲಿ ಪ್ರದೇಶದಲ್ಲಿ ವಾಣಿಜ್ಯ ರಿಯಾಯಿತಿಯನ್ನು ಪಡೆದುಕೊಳ್ಳಲು ಆದೇಶವಾಗಿತ್ತು. ಅಲ್ಲದೆ ಆ ಪ್ರದೇಶದಲ್ಲಿ ಆಗಿನ್ನೂ ಇಂಗ್ಲಿಷರು ಪ್ರಬಲರಾಗಿರಲಿಲ್ಲ. ಪೋರ್ಚುಗೀಸರು, ಡಚ್ಚರು ಮತ್ತು

ಫ್ರೆಂಚರು ಅವರೊಂದಿಗೆ ಸ್ಪರ್ಧಿಸುತ್ತಿದ್ದರು. ಅಂತಹ ಪರಿಸ್ಥಿತಿಯಲ್ಲಿ ಟೀಪುವೂ ಒಬ್ಬ ಸ್ಪರ್ಧಿಯಾದನು. ಇಂಗ್ಲಿಷರಿಗೆ ಕಿರಿಕಿರಿ ಇನ್ನೂ ಹೆಚ್ಚಿತು.

ವಿದೇಶ ಬಂದರುಗಳಲ್ಲಿ ಟೀಪು ಸ್ಥಾಪಿಸಿದ ವಾಣಿಜ್ಯ ಕೋಠಿಗಳಲ್ಲಿ ಮೂರು ಬಗೆಯ ನೌಕರರಿದ್ದರು. ಒಬ್ಬ ವಾಣಿಜ್ಯ ರಾಯಭಾರಿ, ದರೋಗ, ಅವನೇ ಇಡೀ ವ್ಯವಸ್ಥೆಯ ನಿರ್ವಾಹಕ. ಅವನಿಗೆ ಬೆಂಬಲವಾಗಿ ಲೆಕ್ಕಾಧಿಕಾರಿಗಳಿದ್ದರು. ಎಲ್ಲ ಬಗೆಯ ಹಣಕಾಸು ವಿವರಗಳನ್ನೂ ಅವರು ನೋಡಿಕೊಳ್ಳುತ್ತಿದ್ದರು. ಅವರಿಗೆ ವಾಣಿಜ್ಯ ಏಜೆಂಟರು ಮುತ್ಸದ್ದಿಗಳು ಸಹಾಯ ಮಾಡುತ್ತಿದ್ದರು.

1793–94ರ ನಿಯಮಾವಳಿಗಳು ವಿದೇಶೀ ವಾಣಿಜ್ಯ ವ್ಯವಹಾರಗಳ ವಿಸ್ತರಣದಲ್ಲಿ ಬಹು ಮುಖ್ಯವಾದ ಹೆಜ್ಜೆಯಾದುವು. ಟೀಪುವು ಒಂದು ಹೊಸ ವಾಣಿಜ್ಯ ಮಂಡಳಿ ಸ್ಥಾಪಿಸಿದನು. ಅದರ ಸದಸ್ಯರನ್ನು ಮಾಲಿಕ್–ಉಲ್–ತುಜ್ಜರ್ (ವಾಣಿಜ್ಯ ಸ್ಥಾವರಗಳ ಪ್ರಭುಗಳು) ಎಂದು ಕರೆದನು. ಅದೊಂದು ಖಾಯಂ ಸ್ವರೂಪದ ವಾಣಿಜ್ಯ ಮಂಡಳಿ, ಅದರಲ್ಲಿ ಒಂಭತ್ತು ಮಂದಿ ಸದಸ್ಯರಿದ್ದರು. ವಿವಿಧ ವಸ್ತುಗಳ ಆಯಾತ ನಿರ್ಯಾತಗಳ ಹೊಣೆ ಈ ಮಂಡಳಿಯದ್ದಾಗಿತ್ತು. ಅಲ್ಲದೆ ಸೂಕ್ತ ಪ್ರೋತ್ಸಾಹಕಗಳನ್ನೂ ಭರವಸೆಗಳನ್ನೂ ನೀಡಿ ವಿದೇಶೀ ವರ್ತಕರನ್ನು ಮೈಸೂರಿಗೆ ಆಹ್ವಾನಿಸುವುದೂ ಅವರ ಹೊಣೆಗಾರಿಕೆ.

**ಅಂತರ್ದೇಶೀಯ ವ್ಯಾಪಾರ**

ಟೀಪುವು ಅಂತರ್ದೇಶೀಯ ವ್ಯಾಪಾರಕ್ಕೂ ಅಷ್ಟೇ ಪ್ರಾಮುಖ್ಯವನ್ನು ನೀಡಿದನು. ತನ್ನ ರಾಜ್ಯದ ಎಲ್ಲಾ ಭಾಗಗಳಲ್ಲೂ 30 ಡಿಪೋಗಳನ್ನು ತೆರೆದನು. ಶ್ರೀರಂಗಪಟ್ಟಣ, ಬೆಂಗಳೂರು, ಕೋಲಾರ, ಸತ್ಯಮಂಗಲ, ಮುಳಬಾಗಲು, ಮದನಪಲ್ಲಿ, ಗರಮಕೊಂಡ, ಪುಂಗನೂರು, ಚಿತ್ರದುರ್ಗ, ಬಿದನೂರು, ಶಿಕಾರಿಪುರ, ಸುಂದಾ, ಮಂಗಳೂರು, ಕುಶಾಲಪುರ, ಕಾರವಾರ, ಭಟ್ಕಳ, ಜಮಾಲಾಬಾದ್, ಕಲ್ಲಿಕೋಟೆ, ಬನವಾಸಿ ಮತ್ತು ನಂದಿದುರ್ಗಗಳು ಪ್ರಮುಖವಾದವುಗಳು. ಆ ಕಾಲದ ನಿಷ್ಪಕ್ಷಪಾತ ಪ್ರತ್ಯಕ್ಷ ಸಾಕ್ಷಿಗಳ ವರದಿಗಳನ್ನು ನೋಡಿದರೆ, ಟೀಪುವಿನ ನೀತಿಯು ಪ್ರಭಾವಕಾರಿಯಾಗಿದ್ದಿತು ಉತ್ತಮವಾಗಿದ್ದಿತು ಎಂದು ಹೇಳಬಹುದು. ರಾಜ್ಯದಲ್ಲಿ ಸರ್ವತೋಮುಖ ಅಭಿವೃದ್ಧಿ ಕಂಡುಬಂದಿತು.

1799ರಲ್ಲಿ ಟೀಪುವು ಮರಣ ಹೊಂದಿದಾಗ, ಅದಕ್ಕಿಂತ ಸ್ವಲ್ಪ ಮೊದಲು ಅರ್ಧ ರಾಜ್ಯವನ್ನು ಕಳೆದುಕೊಂಡಿದ್ದರೂ ಅಗಾಧ ಮೊತ್ತದ ನಷ್ಟ ಭರ್ತಿ ಹಣವನ್ನು ಪಾವತಿ ಮಾಡಿದ್ದರೂ ಅವನ ಭಂಡಾರವು ತುಂಬಿತ್ತು. ನೆರೆಯ ನಿಜಾಮನಾಗಲಿ, ಮರಾಠರಾಗಲಿ, ಇಂಗ್ಲಿಷರಾಗಲಿ ನಿರಂತರವಾಗಿ ಹಣದ ಮುಗ್ಗಟ್ಟನ್ನು ಅನುಭವಿಸುತ್ತಿರುವಾಗ, ಟೀಪು ಅಂತಹ ಯಾವುದೇ ಸಮಸ್ಯೆಗೆ ಒಳಗಾಗಲಿಲ್ಲ. ಅದಕ್ಕೆ ಕಾರಣ ಅವನ ಸರಕಾರವು ಕೇವಲ ಭೂ ಕಂದಾಯದ ಮೇಲೆ ಅವಲಂಬಿಸದೆ ಬೇರೆ ಬೇರೆ ಸಂಪನ್ಮೂಲಗಳನ್ನು ಸೃಷ್ಟಿಸಿದ್ದುದು. ಬುಚಾನನ್ ಹಾಗೂ ಇತರ ವಸಾಹತು ಇತಿಹಾಸಕಾರರು ಟೀಪುವಿನ ವಾಣಿಜ್ಯ ಚಟುವಟಿಕೆಗಳನ್ನು ಕುರಿತು ಅತ್ಯಂತ ವಿರೂಪಗೊಂಡ ಚಿತ್ರವನ್ನು ನೀಡಿದ್ದಾರೆ.

ಅಶೋಕ್ ಸೇನ್‌ರವರು 'ಟೀಪು ಸುಲ್ತಾನನ ವಾಣಿಜ್ಯ ನೀತಿಯು ಒಬ್ಬ ಚಕ್ರವರ್ತಿ ಆರ್ಥಿಕ ಅಗತ್ಯಗಳ ಸೃಷ್ಟಿ. ಆ ಅಗತ್ಯಗಳು ಈಡೇರಲು ಪೂರೈಕೆಯ ಮೂಲಗಳ ಮೇಲೆ ಸರಕಾರದ ನಿಯಂತ್ರಣ ಅಗತ್ಯವಾಗಿತ್ತು. ಏಕಸ್ವಾಮ್ಯದ ಅಧಿಕಾರವನ್ನು ಉಪಯೋಗಿಸಿಕೊಂಡು ಅಗ್ಗವಾಗಿ ಕೊಳ್ಳುವುದು ತುಟ್ಟಿಯಾಗಿ ಮಾರುವುದು ಎಂಬ ತತ್ವವನ್ನು ನಿರಂತರವಾಗಿ ಅನ್ವಯಿಸುವುದನ್ನು ಅದು ಅವಲಂಬಿಸಿತ್ತು ಎಂದಿದ್ದಾರೆ.

ಅಶೋಕ್ ಸೇನ್ ಮುಂದುವರಿದು ಉತ್ಪನ್ನಗಳಲ್ಲಿ ರೈತನ ಪಾಲು ಏನಿದೆಯೋ ಅದನ್ನು, ವಿಶೇಷವಾಗಿ ಶ್ರೀಗಂಧ, ಕರಿಮೆಣಸುಗಳನ್ನು ಒಂದೇ ಸಮನೆ ಕೊಳ್ಳುತ್ತಿರಲು ನಿಯಮಾವಳಿ ಅವಕಾಶ ಮಾಡಿಕೊಟ್ಟಿತು. ಬಹುಶಃ ರಾಜ್ಯದ ಏಕಸ್ವಾಮ್ಯದಲ್ಲಿದ್ದ ಅತ್ಯಂತ ಮುಖ್ಯ ಸರಕುಗಳೆಂದರೆ ಇವೆಯೆ. ಇವೆಲ್ಲ ಸೇರಿ ಒಂದು ಬಗೆಯ ವರಮಾನದ ಲಂಬಾಕೃತಿ ಸಂಕಲನವು ರೂಪುಗೊಂಡಿತ್ತು. ಟೀಪುಸುಲ್ತಾನನ ವಾಣಿಜ್ಯ ನೀತಿಯ ಚೌಕಟ್ಟಿನಲ್ಲಿ ಹೆಚ್ಚುವರಿ ಹಣವು ಸರಕಾರದ ವಶಕ್ಕೆ ಬಂದಿತು. ಅಂದರೆ ನಿರಂಕುಶ ಪ್ರಭುವಿನ ಅಗತ್ಯಕ್ಕೆ ಒದಗಿತು ಎಂದು ಹೇಳಿದನು.

ಮೈಸೂರಿನಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಟೀಪುವು ಯಾವ ಕ್ರಮವನ್ನೂ ಕೈಗೊಳ್ಳದೆ ಬಿಡಲಿಲ್ಲ. ವಿದೇಶೀ ಗಣ್ಯರಿಗೆ ಅವನು ಬರೆದ ಪ್ರತಿಯೊಂದು ಪತ್ರದಲ್ಲಿಯೂ, ಪ್ಯಾರಿಸ್ ಆಗಲಿ ಕಾನ್‌ಸ್ಟಾಂಟಿನೋಪಲ್ ಆಗಲಿ, ಟೆಹರಾನ್ ಆಗಲಿ, ಮಸ್ಕತ್ ಆಗಲಿ ಯಾವುದೇ ಸ್ಥಳದ ಗಣ್ಯರಿಗೆ ಬರೆದರೂ ಕೆಲಸದಲ್ಲಿ ನಿಪುಣರಾದ ತಂತ್ರಜ್ಞರನ್ನೂ ಕುಶಲಕರ್ಮಿಗಳನ್ನೂ ಕಳುಹಿಸಿಕೊಡಬೇಕೆಂಬ ಕೋರಿಕೆ ಇರುತ್ತಿತ್ತು. ಈ ವಿಷಯದಲ್ಲಿ ಅವನಿಗೆ ಎಷ್ಟು ಆಸಕ್ತಿಯಿದ್ದಿತೆಂದರೆ, ನೆಲೆತಪ್ಪಿದ, ಗೊತ್ತು ಗುರಿಯಿರದ ಇಂಗ್ಲಿಷ್ ಜನರಿಗೆ, ಸೆರೆಯಾದವರಿಗೆ ಯಾವುದೇ ಕಸುಬು ಚೆನ್ನಾಗಿ ಗೊತ್ತಿದ್ದರೆ ಅದನ್ನು ತನ್ನವರಿಗೆ ಕಲಿಸಿಕೊಡುವಂತೆ ಒತ್ತಾಯ ಪಡಿಸುತ್ತಿದ್ದನು.

1784ರಲ್ಲಿ ತುರ್ಕಿಗೆ ಮೊದಲನೆಯ ನಿಯೋಗವನ್ನು ಕಳುಹಿಸಿದಾಗ ಅವರಿಗೆ ಹಿಂದಿರುಗಿ ಬರುವಾಗ ತಮ್ಮೊಂದಿಗೆ ಹಡಗು ನಿರ್ಮಾಣ, ಬಂದೂಕು ತಯಾರಿಕೆ, ಗಾಜು ಹಾಗೂ ಇತರ ಉಪಯುಕ್ತ ವಸ್ತುಗಳ ತಯಾರಿಕೆಯಲ್ಲಿ ನಿಪುಣರಾದವರನ್ನು ಕರೆತರುವಂತೆ ಆದೇಶಿಸಿದ್ದನು. ಆಧುನಿಕ ಕಾಲದಲ್ಲಿ ವ್ಯಾಪಾರೀ ಹಡಗು ಪಡೆಯನ್ನು ಕಟ್ಟಿದ ಮೊದಲನೆಯ ಅರಸ ಟೀಪುವೇ! ರೇಷ್ಮೆ ಉದ್ಯಮದಲ್ಲಿ ಕೂಡ ಅವನಿಗೆ ವಿಪರೀತ ಆಸಕ್ತಿಯಿದ್ದಿತು. ಹಾಗೆಯೇ ಹತ್ತಿ ಬಟ್ಟೆಗಳ ಉದ್ಯಮ, ಮತ್ತು ಕೈಗಾರಿಕೆ, ಕಬ್ಬಿಣ ಕರಗಿಸುವುದು ಮತ್ತು ಎರಕ ಹೊಯ್ಯುವುದು, ಬಂದೂಕ ಮತ್ತು ಫಿರಂಗಿಗಳ ತಯಾರಿಕೆ, ಸಕ್ಕರೆ ತಯಾರಿಕೆ, ಎಣ್ಣೆ ಹಿಂಡುವಿಕೆ ಹಾಗೆಯೇ ಅನೇಕಾನೇಕ ಇತರ ವಸ್ತುಗಳ ತಯಾರಿಕೆ ವಿಷಯದಲ್ಲಿ ಟೀಪುವು ಆಸಕ್ತನಾಗಿದ್ದನು. ಕಲೆ ಮತ್ತು ಕಸಬುಗಾರಿಕೆಗಳಲ್ಲಿ, ಕೈಗಾರಿಕೋದ್ಯಮಗಳಲ್ಲಿ ಮೈಸೂರು ಹದಿನೆಂಟನೆ ಶತಮಾನದ ಕೊನೆಯ ಭಾರತದಲ್ಲಿ ಅತ್ಯಂತ ಸಂಪದ್ಭರಿತವೂ ಪ್ರವರ್ಧಮಾನವೂ ಆದ ರಾಜ್ಯವಾಗಿ ಪರಿಣಮಿಸಿದ್ದುದಕ್ಕೆ ಟೀಪುವಿನ ಈ ಆಸಕ್ತಿಯೇ ಕಾರಣ. ಕಬ್ಬಿಣ ಕಾರ್ಖಾನೆಗಳಿಗೆ ಕೊಟ್ಟ ಪ್ರಾಮುಖ್ಯವನ್ನು 1785ರ ಜಿಲ್ಲಾ ಆಡಳಿತ ನಿಯಮಾವಳಿಯಿಂದಲೂ ಅಧಿಕೃತ ಪತ್ರ ವ್ಯವಹಾರದಿಂದಲೂ ಮನಗಾಣಬಹುದಾಗಿದೆ. ಕಬ್ಬಿಣ ಕರಗಿಸುವುದು ಮತ್ತು ಎರಕಹೊಯ್ಯುವ ಕೆಲಸವನ್ನು ಮಧುಗಿರಿ, ಚೆನ್ನರಾಯದುರ್ಗ ಹಾಗಲವಾಡಿ ಮತ್ತು ದೇವರಾಯ ದುರ್ಗಗಳಲ್ಲಿ ಕೈಗೊಳ್ಳಲಾಗಿದ್ದಿತು. ಆದರೆ ಶ್ರೀರಂಗಪಟ್ಟಣವು ಅದರ ಮುಖ್ಯ ಕೇಂದ್ರವಾಗಿತ್ತು. ಬಂದೂಕುಗಳು, ಕೋವಿಗಳು, ಫಿರಂಗಿಗಳು, ಚಾಕುಗಳು, ಕತ್ತರಿಗಳು ಮತ್ತು ಕೈಗಡಿಯಾರಗಳನ್ನು ಅಲ್ಲಿ ತಯಾರಿಸಲಾಗುತ್ತಿತ್ತು. ತುರ್ಕಿಯ ಸುಲ್ತಾನನಿಗೆ ಉಡುಗೊರೆಯಾಗಿ ಕಳುಹಿಸಿದ, ಮೈಸೂರಿನಲ್ಲಿ ತಯಾರಾದ ವಸ್ತುಗಳು ಅಲ್ಲಿ ಭಾರೀ ಮೆಚ್ಚುಗೆಯನ್ನು ಪಡೆದುವು. ಇಂದು ಕ್ಷಿಪಣಿ ಅಥವಾ ರಾಕೆಟ್ಟುಗಳ ಇತಿಹಾಸವನ್ನು ಗಮನಿಸುವಾಗ, ಹೈದರ್ ಮತ್ತು ಟೀಪುಸುಲ್ತಾನ್ ಈ ಕ್ಷೇತ್ರದಲ್ಲಿ ಕೆಲಸಮಾಡಿದ ಮೊದಲಿಗರೆಂದು ಹೇಳಲಾಗುತ್ತದೆ. ಸಮಕಾಲೀನ ಇತಿಹಾಸಕಾರ ಕಿರ್ಮಾನಿಯ ಶ್ರೀರಂಗಪಟ್ಟಣದ ಕಬ್ಬಿಣದ ಕಾರ್ಖಾನೆಯು ದೇಶಾದ್ಯಂತ ಪ್ರಸಿದ್ಧವಾಗಿದ್ದಿತು ಎಂದು ಬರೆಯುತ್ತಾನೆ. ಅಲ್ಲಿ ತಯಾರಾದ ವಸ್ತುಗಳು ಯೂರೋಪಿನ ವಸ್ತುಗಳಿಗೆ ಸರಿಸಮನಾಗಿದ್ದುವು. ತನ್ನ ಕಬ್ಬಿಣದ ಕಾರ್ಖಾನೆಗಳಿಗೆ ಟೀಪುವು

ತಾರಾಮಂಡಲಗಳೆಂದು ಹೆಸರಿಟ್ಟಿದ್ದನು. ಅಂಥವು ರಾಜ್ಯದಲ್ಲಿ ನಾಲ್ಕು ಇದ್ದುವು. ಶ್ರೀರಂಗಪಟ್ಟಣ, ಬೆಂಗಳೂರು, ಚಿತ್ರದುರ್ಗ ಮತ್ತು ಬಿದನೂರುಗಳಲ್ಲಿ, ಪ್ರಾಮುಖ್ಯದಲ್ಲೂ ಅವು ಅದೇ ಅನುಕ್ರಮದಲ್ಲಿದ್ದುವು. ಶ್ರೀರಂಗಪಟ್ಟಣದ ಕಾರ್ಖಾನೆಯಲ್ಲಿ ಕಬ್ಬಿಣವನ್ನು ಉಕ್ಕಾಗಿ ಪರಿವರ್ತಿಸುವ ಐದು ಘಟಕಗಳಿದ್ದುವು. ಚನ್ನಪಟ್ಟಣದಲ್ಲೂ ಒಂದು ಅದಿರು ಕರಗಿಸುವ ಹಾಗೂ ಎರಕ ಹೊಯ್ಯುವ ಘಟಕವಿತ್ತು.

ಕಿರ್ಮಾನಿ ಪ್ರಕಾರ ಟೀಪುವಿನ ಕೆಲಸಗಾರರು 66 ಅದ್ಭುತ ವಿವರಣೆಯುಳ್ಳ ಬಂದೂಕುಗಳನ್ನು, ಸಿಂಹ–ಮುಖದ ತುಪಾಕಿಗಳನ್ನು, ಎರಡು ಅಥವಾ ಮೂರು ನಳಿಗೆಗಳ ಕೋವಿಗಳನ್ನು ತಯಾರಿಸುತ್ತಿದ್ದರು. ಬಂದೂಕು ಮತ್ತು ಕೋವಿಗಳನ್ನು ಯೂರೋಪಿಯನ್ ಮಾದರಿಯಲ್ಲಿ, ವಿಶೇಷವಾಗಿ ಫ್ರೆಂಚ್ ವಿನ್ಯಾಸದಲ್ಲಿ ತಯಾರಿಸುತ್ತಿದ್ದರು. ಹೈದರನ ಸೇವೆಯಲ್ಲಿದ್ದ ಮಾನ್ಸಿಯ ಲಾಪೋಲಿ ಪ್ರಧಾನ ವಿನ್ಯಾಸಕಾರನಾಗಿದ್ದನು. ಇದಲ್ಲದೆ 1797 ಏಪ್ರಿಲ್ 2 ರಂದು ಟೀಪುವು ಫ್ರಾನ್ಸ್ ದೇಶದಿಂದ ಇನ್ನೂ ಹೆಚ್ಚಿನ ತಂತ್ರಜ್ಞರನ್ನು ಕರೆತರಲು ಆದೇಶಿಸಿದನು. 18ನೇ ಶತಮಾನದ ಮದ್ಯಭಾಗದಲ್ಲಿ ಮೈಸೂರಿನಲ್ಲಿ ಅಭಿವೃದ್ಧಿಗೊಂಡ ಬಂಡವಾಳಶಾಹಿ ಕೈಗಾರಿಕೆಗಳು ಮಾದರಿ ಬಂಡವಾಳಶಾಹಿ ಉದ್ಯಮಗಳಾಗಿದ್ದುವು. ನೌಕಾ ನಿರ್ಮಾಣ, ಹಡಗು ನಿರ್ಮಾಣಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟನು. ಟೀಪುವು ಒಂದು ನೌಕಾದಳ ವಿಭಾಗವನ್ನು ರೂಪುಗೊಳಿಸಿದನು, ಬಗೆಬಗೆಯಾದ ಹಡಗುಗಳನ್ನು ಹೊಂದಿದ್ದ ಸುಮಾರು 10,000 ಜನ ಈ ಸೇನೆಯಲ್ಲಿದ್ದರು. ಅವನ ಬಳಿ 40 ಯುದ್ಧ ನೌಕೆಗಳಿದ್ದುವು. ಇವು ಕಲ್ಲಿಕೋಟೆ, ಮಂಗಳೂರು ಮತ್ತು ಸದಾಶಿವಗಡಗಳಲ್ಲಿದ್ದವು. ಮೈಸೂರಿನಲ್ಲಿ ರೇಷ್ಮೆ ಉದ್ಯಮವನ್ನು ಅಭಿವೃದ್ಧಿಪಡಿಸಿದವನು ಟೀಪು, ತನ್ನ ರಾಜ್ಯದಲ್ಲಿ ವ್ಯಾಪಕ ಪ್ರಮಾಣದಲ್ಲಿ ರೇಷ್ಮೆ ಹುಳು ಸಾಕಣೆಯನ್ನು ಪ್ರೋತ್ಸಾಹಿಸಿದನು. 1786 ಸೆಪ್ಟೆಂಬರ್ 27ರಂದು ಬರೆದ ಆ ಪತ್ರದಲ್ಲಿ ಬಂಗಾಳಕ್ಕೆ ರೇಷ್ಮೆ ಹುಳುಗಳನ್ನು ತರಲೆಂದು ಕಳುಹಿಸಿದ್ದ ಬರ್ಹನುದ್ದೀನ್ ಮತ್ತು ಕಸ್ತೂರಿ ರಂಗ ಇವರಿಬ್ಬರೂ ಹಿಂದಿರುಗುತ್ತಿದ್ದಾರೆಂದೂ, ಆ ಹುಳುಗಳನ್ನು ಬಹು ಜಾಗರೂಕತೆಯಿಂದ ನೋಡಿಕೊಳ್ಳಬೇಕೆಂದೂ ತಿಳಿಸಿದನು. ಅಂತಹ ಯುದ್ಧದ ನಡುವೆಯೂ ಈ ವಿಷಯವಾಗಿ ಪತ್ರ ಬರೆಯಲು ಟೀಪುವು ಸಮಯ ಮಾಡಿಕೊಂಡನು. ರೇಷ್ಮೆ ಕೃಷಿ ನಡೆಯುತ್ತಿದ್ದ ಇಪ್ಪತ್ತೊಂದು ಕೇಂದ್ರಗಳನ್ನು ಅವನು ಸ್ಥಾಪಿಸಿದ್ದನು. ಬಂಗಾಳಾದಿಂದ ಮಾತ್ರವಲ್ಲದೆ ಮಸ್ಕತ್ತಿನಿಂದಲೂ ರೇಷ್ಮೆ ಹುಳುಗಳನ್ನು ತರಿಸಲಾಗಿತ್ತು. ರೇಷ್ಮೆ ವಸ್ತ್ರಗಳನ್ನು ನೇಯುವ ಕಸಬು ಮಾಡುತ್ತಿದ್ದವರು ಪಟೇಗಾರರು ಮತ್ತು ಖತ್ತಿಗಳು ಎಂಬ–ಎರಡು ಪಂಗಡದ ಜನರು, ಬಹಳ ಬೇಡಿಕೆಯಿರುತ್ತಿದ್ದ ಅತ್ಯಂತ ಸೂಕ್ಷ್ಮ ನವಿರಾದ ರೇಷ್ಮೆ ಬಟ್ಟೆಗಳನ್ನು ಅವರು ನೇಯುತ್ತಿದ್ದರು. ಬೆಂಗಳೂರಿನ ನೇಕಾರರು ಈ ಕಸಬಿನಲ್ಲಿ ಬೇರೆ ಎಲ್ಲರನ್ನೂ ಮೀರಿಸಿದ್ದರು ಎಂದು ಬುಚಾನನ್ ಬರೆಯುತ್ತಾನೆ.

ಟೀಪುವು ತುಂಬ ಪ್ರೋತ್ಸಾಹ ನೀಡಿದ ಇನ್ನೊಂದು ಉದ್ಯಮವೆಂದರೆ ಜವಳಿ ಉದ್ಯಮ, ಅವನು ಸ್ಥಾಪಿಸಿದ ಬಟ್ಟೆ ಮಗ್ಗಗಳು ಬಹು ನಯವಾದ ಹತ್ತಿ ಬಟ್ಟೆಯನ್ನು ತಯಾರಿಸುತ್ತಿದ್ದವು. ಟೀಪುವು "ಶಾಲುಗಳು, ಕಿಂಕಾವುಗಳು (ಚಿನ್ನದ ಬಟ್ಟೆ), ಬ್ರಾಡ್ ಕ್ಲಾತ್ (ಯೂರೋಪಿಯನ್) ಮೊದಲಾದ ಎಲ್ಲಾ ದೇಶಗಳ ಬಟ್ಟೆಗಳನ್ನು ನೇಯಿಸುತಿದ್ದನು. ಈ ಉದ್ಯಮಗಳಿಗಾಗಿ ಸಹಸ್ರಾರು ಪೌಂಡುಗಳನ್ನು ಅವನು ವೆಚ್ಚ ಮಾಡಿದನು" ಎಂಬುದಾಗಿ ಕಿರ್ಮಾನಿ ಬರೆಯುತ್ತಾನೆ. ಪ್ರಖ್ಯಾತವಾದ ಭಾರತೀಯ ಮಸ್ಲಿನ್ ಬಟ್ಟೆಯೂ ಮೈಸೂರಿನಲ್ಲಿ ತಯಾರಾಗುತ್ತಿತ್ತು. ವಸ್ತ್ರೋದ್ಯಮಕ್ಕೆ ಬೆಂಗಳೂರು ಪ್ರಖ್ಯಾತವಾಗಿತ್ತು. ಮುಸ್ಲಿಂ ನೇಕಾರರ ಒಂದು ಪಂಗಡ ಪಟ್ವೇಗಾರರೆಂದು ಪ್ರಸಿದ್ಧರಾದವರು ಈ ಕಲೆಯಲ್ಲಿ ಉಳಿದೆಲ್ಲರನ್ನೂ

ಮೀರಿಸಿದ್ದರು. ಶ್ರೀರಂಗಪಟ್ಟಣದ ಸಮೀಪದಲ್ಲೇ ಇದ್ದ ನೆಲಘಟ್ಟ ಬಹು ಮುಖ್ಯವಾದ ಜವಳಿ ಉದ್ಯಮದ ಕೇಂದ್ರವಾಗಿತ್ತು. ಅಲ್ಲಿ ಸಾದಾಶಿಳ್ಳೆ ಎಂಬ ಹೆಸರಿನ ಒಂದು ಬಗೆಯ ಬಟ್ಟೆ ತಯಾರಾಗುತ್ತಿತ್ತು. ಗುಬ್ಬಿಯು ಸೀರೆಗಳಿಗೆ ಪ್ರಖ್ಯಾತವಾಗಿತ್ತು. ಸತ್ಯಮಂಗಲದಲ್ಲಿ 800ರಷ್ಟು ಮಗ್ಗಗಳಿದ್ದುವು. 46 ಮಗ್ಗಗಳಿದ್ದ ಕೊಯಮತ್ತೂರು ಇನ್ನೊಂದು ಜವಳಿ ಉದ್ಯಮ ಕೇಂದ್ರವಾಗಿತ್ತು. ರೇಷ್ಮೆಯಷ್ಟೇ ನುಣುಪಾದ ಹತ್ತಿ ಬಟ್ಟೆಗೆ ಅದು ಪ್ರಸಿದ್ಧವಾಗಿತ್ತು. ಟೀಪುವಿನ ರಾಜ್ಯದ ಕೇರಳ ಜಿಲ್ಲೆಗಳು ಲಾಂಗ್ ಕ್ಲಾತ್ ಬಟ್ಟೆಗೆ ಹೆಸರಾಗಿದ್ದುವು. ವಸ್ತ್ರೋದ್ಯಮಕ್ಕೆ ಖ್ಯಾತವಾಗಿದ್ದ ಇನ್ನೊಂದು ಕೇಂದ್ರ ಸೇಲಂ. ಹರಿಹರವೂ ಹತ್ತಿ ನೂಲಿಗೆ ಹೆಸರಾಗಿತ್ತು.

ಇತರ ಕೈಗಾರಿಕೆಗಳ ಅಭಿವೃದ್ಧಿಯಲ್ಲೂ ಟೀಪುವು ಆಸಕ್ತಿ ವಹಿಸಿದನು. ಮುತ್ತು ಆಯುವ ಉದ್ಯಮದಲ್ಲಿ ಅವನಿಗೆ ಬಹಳ ಉತ್ಸಾಹವಿತ್ತು. ಮಸ್ಕತ್ತಿನಲ್ಲಿದ್ದ ತನ್ನ ವ್ಯಾಪಾರೀ ಪ್ರತಿನಿಧಿಗಳಿಗೆ ಒಳ್ಳೆಯ ಮುಳುಗೀಜುಗಾರರನ್ನು ಕರೆದುಕೊಂಡು ಬರಲು ತಿಳಿಸಿದ್ದನು. ಮಂಗಳೂರಿನ ಬಳಿ ಪಶ್ಚಿಮ ಕರಾವಳಿಯಲ್ಲಿ ಮುತ್ತುಗಳನ್ನು ಕಡಲಾಳದಿಂದ ಆರಿಸಿ ತರಲು ಅವರ ಅಗತ್ಯವಿತ್ತು. ಮಸ್ಕತ್ತಿನಲ್ಲಿ ಅಂಥವರು ಯಾರೂ ದೊರಕದೆ ಹೋಗಲು, ಬೆಹರೇನ್ ಮತ್ತು ಆರ್ಮಿಜ್‌ಗಳಲ್ಲಿ ಹುಡುಕಬೇಕೆಂದು ಆದೇಶಿಸಿದನು. ಅನೇಕ ಕಡೆಗಳಲ್ಲಿ ತೊಗಲು ಹದಮಾಡುವಿಕೆ ನಡೆದಿತ್ತು. ಎಣ್ಣೆ ಹಿಂಡುವುದಂತೂ ಸಾಮಾನ್ಯವಾಗಿತ್ತು. ಶ್ರೀರಂಗಪಟ್ಟಣದಲ್ಲೊಂದು ಕಾಗದ ಕಾರ್ಖಾನೆಯಿತ್ತು. ಮುರ್ತೊಡಿ ಮತ್ತು ಚನ್ನಪಟ್ಟಣಗಳಲ್ಲಿ ಗಾಜಿನ ವಸ್ತುಗಳು ತಯಾರಾಗುತ್ತಿದ್ದುವು. ಕಲ್ಲಿಗೆ ಹೊಳಪು ಕೊಡುವುದು ಮತ್ತು ಕೊರೆಯುವುದು ಈ ಕೆಲಸವನ್ನು ಅನೇಕ ಕಡೆ ಮಾಡುತ್ತಿದ್ದರು. ಹೊಳಪು ಕೊಡುವ ಈ ಕೆಲಸವು ಯಾವ ಗುಣಮಟ್ಟದ್ದಾಗಿದ್ದತೆಂಬುದನ್ನು ಗುಂಬಜಿನಲ್ಲಿರುವ ಟೀಪುವಿನ ಸಮಾಧಿಯ ಕಂಬಗಳನ್ನು ನೋಡಿ ತಿಳಿದುಕೊಳ್ಳಬಹುದು. ಮೈಸೂರಿನಲ್ಲಿ ತಯಾರಾಗುತ್ತಿದ್ದ ಮದ್ದಿನಪುಡಿಯು ಇಂಗ್ಲೆಂಡಿನಲ್ಲಿ ತಯಾರಾಗುತ್ತಿದ್ದುದಕ್ಕಿಂತಲೂ ಉತ್ತಮ ಗುಣಮಟ್ಟದ್ದಾಗಿತ್ತು. ಚನ್ನಪಟ್ಟಣದಲ್ಲಿ ಸಂಗೀತವಾದ್ಯಗಳಿಗೆ ಕಟ್ಟಲು ಬಳಸುವ ಒಂದು ಬಗೆಯ ತಂತಿಯನ್ನು ತಯಾರಿಸಲಾಗುತ್ತಿತ್ತು. ಅದಕ್ಕೆ ಭಾರತದ ಎಲ್ಲ ಕಡೆಗಳಿಂದಲೂ ಬೇಡಿಕೆಯಿರುತ್ತಿದ್ದಿತು. ಮಾಸೂರಿನಲ್ಲಿ ಸಾಕಷ್ಟು ಸಕ್ಕರೆ ಕಾರ್ಖಾನೆಗಳಿದ್ದುವು. ಚಿಕ್ಕಬಳ್ಳಾಪುರ ಕಲ್ಲುಸಕ್ಕರೆಗೆ ಪ್ರಸಿದ್ಧವಾಗಿತ್ತು. ಚೈನಾದಿಂದ ಕರೆಸಿದ ತಜ್ಞರ ನೆರವು ಪಡೆದು ಸೊಗಸಾದ ಗುಣಮಟ್ಟದ ಸಕ್ಕರೆಯನ್ನು ತಯಾರಿಸಲಾಗುತ್ತಿತ್ತು. ಸಕ್ಕರೆ ರಫ್ತು ಮಾಡುವ ಸಾಮಗ್ರಿಯಾಯಿತು. ಅದನ್ನು ನೋಡಿಯೇ ಟೀಪುವು ಭಾರತದಲ್ಲಿ ಉದ್ಯಮೀಕರಣದ ಆರಂಭಕ್ಕೆ ಮತ್ತು ಬಂಡವಾಳ ಶಾಹಿಯ ಯುಗಕ್ಕೆ ತೊಂದರೆ ಆಗಿದ್ದನೆಂದು ಚಿಚೆರೋವ್ ಹೇಳಿದ್ದು.

ಕಲ್ಲುಗಳನ್ನು ವಿವಿಧ ಆಕಾರಗಳಿಗೆ ಕತ್ತರಿಸುವುದು ಅವುಗಳಲ್ಲೊಂದು, ಕುರಿಯ ಉಣ್ಣೆಯನ್ನು ವ್ಯವಸ್ಥಿತವಾದ ವ್ಯಾಪಕವಾದ ರೀತಿಯಲ್ಲಿ ಉತ್ಪಾದಿಸಲು ಅವನ ಸರಕಾರವು ಸಹಾಯಮಾಡಿತು. ಕುರಿಸಾಕಣಿಕೆ ಅಪಾರ ಪ್ರೋತ್ಸಾಹ ದೊರಕಿತು. ಅವನ ಟಂಕಸಾಲೆಗಳಿಂದ ಬಗೆಬಗೆಯಾದ ನಾಣ್ಯಗಳು ಹೊರಬಂದವು. ಅವನ ಅನ್ವೇಷಕ ಪ್ರವೃತ್ತಿಯ ಉತ್ತಮ ನಿದರ್ಶನವಾಗಿ ಪದೇ ಪದೇ ಆ ನಾಣ್ಯಗಳನ್ನು ಉಲ್ಲೇಖಿಸಲಾಗುತ್ತದೆ. ಅವನ ಬಹುತೇಕ ನಾಣ್ಯಗಳಲ್ಲಿ ಹಿಂಬದಿಯ ಮುಖದಲ್ಲಿ ಆನೆಯ ಚಿತ್ರವಿರುತ್ತದೆ. ಆನೆ ಸಾರ್ವಭೌಮತೆಯ ಸಂಕೇತ, ದಕ್ಷಿಣ ಭಾರತದ ಅನೇಕ ರಾಜವಂಶಗಳು ಆ ಚಿಹ್ನೆಯನ್ನು ಬಳಸಿವೆ. ಹೈದರನು ನಾಣ್ಯಗಳ ಮೇಲೆ ತನ್ನ ಹೆಸರಿನ ಮೊದಲು ಅಕ್ಷರವನ್ನಾದರೂ ಕೆತ್ತಿಸಿದ್ದನು, ಆದರೆ ಟೀಪು ತನ್ನ ಹೆಸರನ್ನು ಬರೆಸಲಿಲ್ಲ. ಇಸ್ಲಾಮಿಕ್ ಇತಿಹಾಸದ ಮಹಾಪುರುಷರ, ಪ್ರವಾದಿ, ನಾಲ್ವರು ಕಲೀಫರು, ಇಮಾಮರು ಮೊದಲಾದವರ ಹೆಸರುಗಳನ್ನು ತನ್ನ ನಾಣ್ಯಗಳ ಮೇಲೆ ಟಂಕಿಸಲು

ಏರ್ಪಾಟು ಮಾಡಿದ್ದನು. ನಾಲ್ಕು ಪಗೋಡ ಬೆಲೆಯ ಚಿನ್ನದ ನಾಣ್ಯದ ಮೇಲೆ ಪ್ರವಾದಿಯ ಹೆಸರು ಅಹ್ಮದಿ ಎಂದಿತ್ತು; ಇತರ ನಾಣ್ಯಗಳ ಮೇಲೆ ಸಿದ್ದಿಕಿ, ಫರೂಕಿ, ಉಸ್ಮಾನಿ ಮತ್ತು ಹೈದರಿ ಎಂದು ನಾಲ್ವರು ಕಲೀಫರ ಹೆಸರುಗಳಿದ್ದುವು. ಇನ್ನೂ ಕೆಲವಕ್ಕೆ ಇಮಾಮಿ, ಅಬ್ಬೆರಿ, ಬಾಕೆರಿ, ಕಾಜಿಮಿ, ಮತ್ತು ಖಿಜರಿ ಎಂದು ಇಮಾಮದ ಹೆಸರುಗಳಿದ್ದುವು. ನಕ್ಷತ್ರಗಳ ಹೆಸರುಗಳನ್ನೂ ಉಪಯೋಗಿಸಿದನು. ಅವು ಮುತ್ತರಿ, ಜಾಹ್ರಾ, ಬೆಹ್ರಾಂ, ಅಬರ್, ಮತ್ತು ಔತುಬ್ ಇತ್ಯಾದಿ. ಎಲ್ಲ ನಾಣ್ಯಗಳಲ್ಲೂ ಅವು ಟಂಕಿತವಾದ ಟಂಕಸಾಲೆಯ ಹೆಸರು ಇದ್ದೇ ಇರುತ್ತಿತ್ತು. ರಾಜ್ಯದಲ್ಲಿ ಒಟ್ಟು 12 ಟಂಕಸಾಲೆಗಳಿದ್ದವು. ಅವುಗಳಲ್ಲಿ ಮುಖ್ಯವಾದವು ಶ್ರೀರಂಗಪಟ್ಟಣ, ಮೈಸೂರು, ಬೆಂಗಳೂರು, ಬಿದನೂರು, ಚಿತ್ರದುರ್ಗ, ಕಲ್ಲಿಕೋಟೆ, ದಿಂಡಿಗಲ್, ಧಾರವಾಡ ಮತ್ತು ಗುತ್ತಿಗಳಲ್ಲಿದ್ದುವು. ನಾಣ್ಯ ಶಾಸ್ತ್ರದ ಪ್ರಕಾರ ಟೀಪುವಿನ ನಾಣ್ಯಗಳು ಬಹು ಉತ್ತಮ ವರ್ಗಕ್ಕೆ ಸೇರಿದವಾಗಿದ್ದುವು. ಅದೇ ರೀತಿಯಲ್ಲಿ, ಟೀಪುವಿನ ಕೈಗಾರಿಕಾ ನೀತಿಯು ಜನರ ಮೇಲೆ ತುಂಬಾ ಪ್ರಭಾವ ಬೀರಿತು. ಕುಶಲಕರ್ಮಿಗಳಿಗೆ ಅಪಾರ ಪ್ರೋತ್ಸಾಹ ದೊರಕಿತು. ತಂತ್ರಜ್ಞರನ್ನು, ಕುಶಲ ಕಾರ್ಮಿಕರನ್ನು ಜಗತ್ತಿನ ಎಲ್ಲ ಭಾಗಗಳಿಂದಲೂ ಸ್ವಾಗತಿಸಲಾಯಿತು. ಟೀಪುವು ಕೈಗೊಂಡ ಅನೇಕಾನೇಕ ಯೋಜನೆಗಳು, ಅವು ಉತ್ತಮವಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುವುದರಲ್ಲಿ ಅವನು ತೋರಿದ ಆಸಕ್ತಿ ಇವು, ಒಂದು ಬೃಹತ್ತಾದ ಕಾರ್ಮಿಕ ಪಡೆಯನ್ನೇ ರೂಪಿಸಲು ಅವನು ಕಾತರನಾಗಿದ್ದನೆಂಬುದನ್ನು ಸೂಚಿಸುತ್ತವೆ. ಅವರ ಮಾಸಿಕ ವೇತನಾದಿ ವರಮಾನಗಳು ತುಂಬಾ ಹೆಚ್ಚಾಗಿದ್ದವು. ಅವರು ದೇಶದ ಬೇರೆ ಬೇರೆ ಭಾಗಗಳಿಂದ, ವಿದೇಶಗಳಿಂದಲೂ ಬರುತ್ತಿದ್ದರು. ವಿಧವಿಧವಾದ ಕಲೆಗಳಲ್ಲಿ ಕಸುಬುದಾರಿಕೆಯಲ್ಲಿ ಅವರು ಪರಿಣಿತರಾಗಿರುತ್ತಿದ್ದರು. ಅವರು ಸ್ಥಳೀಯ ಜನರೊಂದಿಗೆ ಕೂಡಿಕೊಳ್ಳಬೇಕಾಗಿತ್ತು. ಇದು ಖಂಡಿತವಾಗಿಯೂ ಮೈಸೂರನ್ನು ಮಹಾನ್ ಸಾಮಾಜಿಕ ಪರಿವರ್ತನೆಯ ಕುಲುಮೆಯೊಳಕ್ಕೆ ನೂಕುತ್ತಿದ್ದಿತು. ಆಹಾರದ ಅಭ್ಯಾಸಗಳು, ಜೀವನ ವಿಧಾನ ಮತ್ತು ಆಲೋಚನೆಗಳು, ಭಾಷೆ–ಸಂಸ್ಕೃತಿ, ವೇತನ ಅಸಮಾನತೆ, ಒತ್ತರದ ಕಾರವೇಳಾಪಟ್ಟಿ, ಇವೆಲ್ಲ ಬೇರೆ ಬೇರೆಯಾಗಿದ್ದುದರಿಂದ ಟೀಪುವು ತನ್ನ ಇಡೀ ರಾಜ್ಯವನ್ನೇ ಮಧ್ಯಮಯುಗದಿಂದ ಆಧುನಿಕಯುಗಕ್ಕೆ ಪರಿವರ್ತನೆಯ ಸಂಧಿಕಾಲದ ಪ್ರಯೋಗಶಾಲೆಯನ್ನಾಗಿ ಮಾರ್ಪಡಿಸುತ್ತಿದ್ದನು.

ಮುಂದಿನ ಪೀಳಿಗೆಗೆಂದು ಟೀಪು ಒಂದು ಸಂದೇಶವನ್ನು ಬಿಟ್ಟಿದ್ದಾನೆ. ಮೊದಲನೆಯದಾಗಿ, ವ್ಯಕ್ತಿಯು ಒಂದು ಉದಾತ್ತ ಉದ್ದೇಶಕ್ಕಾಗಿ ಬದುಕಬೇಕು, ಸಾಯಬೇಕು. ಅವನು ಯಾವುದಕ್ಕಾಗಿ ಬದುಕಿದನೋ, ಪ್ರಾಣಾರ್ಪಣೆ ಮಾಡಿದನೋ ಆ ಉದ್ದೇಶ ಸ್ವಾತಂತ್ರ್ಯ, ವಿಮೋಚನೆಯೇ ಇತಿಹಾಸದ ಆತ್ಮ, ಇಡೀ ಇತಿಹಾಸವೇ ಸಾಲಾಗಿ ತೆರೆದುಕೊಳ್ಳುವ ಮಾನವನ ಸ್ವಾತಂತ್ರ್ಯ ಹೋರಾಟದ ಕತೆ. ಅದು ಕೇವಲ ರಾಜಕೀಯ ವಿಮೋಚನೆ ಮಾತ್ರವಲ್ಲ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವಿಮೋಚನೆ ಕೂಡ. ಎರಡನೆಯದಾಗಿ ಅವನ ತತ್ವವೊಂದನ್ನು ನಾವು ನೆನಪಿನಲ್ಲಿಡಬೇಕು. ಹಣ್ಣುಗಳನ್ನು ಬಿಡಿಸಿಕೊಳ್ಳಲು ಮರವನ್ನು ಕಡಿಯಬೇಕಾಗಿಲ್ಲ. ಅವನ ಕಾಲದಲ್ಲಿ ಕಂಡುಬರುತ್ತಿದ್ದ ಕುಸಿಯುತ್ತಿದ್ದ ರಾಜ್ಯಗಳು ತಮ್ಮದೇ ತೋಟವನ್ನು ಬೆಳೆಸುವ ಬದಲು ಕಡಿದುಹಾಕುತ್ತಿದ್ದುವು. ಮೂರನೆಯದಾಗಿ, ಭಾರತವು ಅನಂತ ಸಂಪದ್ಭರಿತ ದೇಶ, ಚಿನ್ನದ ಗಣಿ ಎಂದು ಟೀಪುವಿಗೆ ಗೊತ್ತಿತ್ತು. ಜನರನ್ನು ಸುಖ ಸಂತೋಷಗಳಿಂದಿಡಬೇಕಾದರೆ ಆ ಸಂಪನ್ಮೂಲಗಳನ್ನು ಸರಿಯಾಗಿ ಬೆಳಸಿಕೊಳ್ಳಬೇಕಾಗಿತ್ತು. ತನ್ನ ಬದುಕಿನುದ್ದಕ್ಕೂ ಟೀಪುವು ತನ್ನ ರಾಜ್ಯವನ್ನು ಭಾರೀ ಸಾಮಾಜಿಕ ಪರಿವರ್ತನೆಯ ಸಾಧನವಾಗುವಂತೆ ಆಧುನಿಕಗೊಳಿಸಲು ಪ್ರಯತ್ನಿಸಿದನು. ನಾಲ್ಕನೆಯದಾಗಿ, ಆ ಕಾಲದ, ಅಷ್ಟೇ ಏಕೆ ಎಲ್ಲ ಕಾಲದ ತುರ್ತು

ಅಗತ್ಯ, ಅನೈಕ್ಯತೆ, ಜಡತ್ವ, ಔದಾಸೀನ್ಯ, ಹೊಸದನ್ನು ಹುಡುಕುವುದರಲ್ಲಿ ನಿರಾಸಕ್ತಿ ಇವುಗಳನ್ನು ಕೊಡವಿಹಾಕಬೇಕು ಎಂಬುದನ್ನು ಟೀಪು ಅರಿತಿದ್ದನು. ತಾನೇ ಸ್ವತಃ ಕ್ರಿಯಾಶೀಲನಾಗಿ, ಅನ್ವೇಷಕ ಹಾಗೂ ಸುಧಾರಕ ಪ್ರವೃತ್ತಿಯುಳ್ಳವನಾಗಿ ಮಾದರಿ ಹಾಕಿಕೊಟ್ಟಿದ್ದನು. ಅವನ ಸಮೃದ್ಧ, ಅವಿಶ್ರಾಂತ, ಮನಸ್ಸು ಅನೇಕಾನೇಕ ಯೋಜನೆಗಳನ್ನು ರೂಪಿಸಿತು. ಅವನು ತನ್ನ ಕಾಲಕ್ಕಿಂತ ಬಹಳ ಮುಂದಿದ್ದನು. ನಿಜವಾದ ಪ್ರಗತಿಯೆನ್ನುವುದು ಒಂದು ಮನಸ್ಥಿತಿ. ಸಮರ್ಪಕವೂ ದಕ್ಷವೂ ಆದ ಹಾಗೂ ಮೆಚ್ಚುಗೆಯ ಅಂಶಗಳನ್ನು ಅದು ಉತ್ಪಾದಿಸುತ್ತದೆ. ಸಮರ್ಪಕವಾದ ಅಂಶವು ಕಾಲದೇಶಗಳ ಮಿತಿಯಲ್ಲಿ ಕೆಲಸ ಮಾಡುತ್ತದೆ. ಆದರೆ ಮೆಚ್ಚುಗೆಯ ಅಂಶವಾದರೋ ಕಾಲ ದೇಶಗಳನ್ನು ಭೇದಿಸಿ ಅಂತಸ್ಸತ್ವದ ನಿಜವನ್ನು ಪ್ರಕಟಪಡಿಸುತ್ತದೆ. ಟೀಪುವು ತನ್ನ ಪ್ರತಿಭೆಯು ಅವಕಾಶ ಕೊಟ್ಟಷ್ಟು ಮಟ್ಟಿಗೆ ದಕ್ಷತೆಯಿಂದ ಕಾಲ ದೇಶಾದೀನವಾಗಿ ಬದುಕಿ ಕಾರ್ಯ ನಿರ್ವಹಿಸಿದನು; ಆದರೆ ಅವನು ಮಾಡಿದ್ದೆಲ್ಲವೂ ಯಾವುದೇ ಹಂತದಲ್ಲಿ ಸರಿಯಾಗಿ ನಡೆದಂತೆ ತೋರಲಿಲ್ಲ. ಆದರೇನು ಅವನ ಆಲೋಚನೆಗಳನ್ನು ಮತ್ತು ಕಾರ್ಯಗಳನ್ನು ಮೆಚ್ಚುವ ಅಂಶವು ಎಂದೆಂದಿಗೂ ಗೌರವ, ಸ್ವಾತಂತ್ರ್ಯಗಳ ಬದುಕನ್ನು, ಬಾಳಬೇಕೆಂದು ಬಯಸುವ ಯಾವುದೇ ದೇಶಕ್ಕೆ ದಾರಿದೀಪವಾಗಿ ಬೆಳಗುತ್ತಿರುತ್ತದೆ.

**ಪರಾಮರ್ಶನ ಗ್ರಂಥಗಳು**


- ನಂಜರಾಜೇ ಅರಸ್. (2022). *ಟೀಪು: ಮಾನ್ಯತೆ ಸಿಗದ ಸುಲ್ತಾನ: ಅಂದು–ಇಂದು.* ಅಭಿರುಚಿ ಪ್ರಕಾಶನ.
- ಷೇಕ್ ಅಲಿ. ಬಿ. (ಪ್ರ.ಸಂ). *ಕರ್ನಾಟಕ ಚರಿತ್ರೆ: ಕ್ರಿ.ಶ. 1750–1800, ಸಂಪುಟ 5,* ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ.
- Sheik Ali, B. (1982). *Tipu Sultan: A Study in Diplomacy and Confrontation.* Geeta Book House.
- Sheik Ali, B. (1993). *Tipu Sultan: A Great martyr.* Bangalore University Press.
- Sheik Ali, B. (1999). *Tipu Sultan*. National book Trust.
- Sheik Ali, B. (2012). *Tipu Sultan: A crusader for change.* Karnataka gazetteer Department.